ಸೌತೆ ಬಳ್ಳಿಯ ಮೇಲೆ ಪ್ರೀತಿ ಹೆಚ್ಚಿಗೆ ಇತ್ತೊ ನನಗೆ ಈಗಲೂ ನಿರ್ಣಯಿಸಲು ಸಾಧ್ಯವಾಗಿಲ್ಲ. ಎರಡನ್ನೂ ಒಂದೇ ಏಟಿಗೆ ಸಾಧಿಸಲು ಬಂದಿದ್ದಳೆಂದು ಕಾಣುತ್ತದೆ.

ಮೇಯಲು ಹೋದ ದನಗಳು ಮರಳಿ ಹಟ್ಟಿಗೆ ಬಂದು ಸೆಲ್ಫ್ ಪಾರ್ಕಿಂಗ್ ಮಾಡಿಕೊಳ್ಳುವ ಗುಣ ದ್ವಾಪರಯುಗದಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಅದಕ್ಕೆ ಪ್ರೂಫ್ ಇದೆ: ಸಾಮಾನ್ಯವಾಗಿ ಎಲ್ಲ ದನಗಳಿಗೆ ಬೆನ್ನಮೇಲೆ, ಅಂದರೆ ಹಿಂಗಾಲುಗಳು ಪಕ್ಕೆಗೆ ಸೇರಿಕೊಳ್ಳುವಲ್ಲಿ ತ್ರಿಕೋನಾಕೃತಿಯ ತಗ್ಗು ಇರುತ್ತದೆ. ದಪ್ಪ ದನಗಳಿಗೆ ಅದು ಎದ್ದು ಕಾಣುವುದಿಲ್ಲ. ದನಪೇತಲ ಗೋವುಗಳು ಎಷ್ಟೇ ಮೇವು ತಿಂದರೂ ಆ ತಗ್ಗು ಭರ್ತಿ ಆಗುವುದೇ ಇಲ್ಲ. ಅದು ಹಾಗೇಕೆ ಎಂದು ಕೇಳಿದರೆ ಅಮ್ಮ, ‘‘ಅದು ಶ್ರೀಕೃಷ್ಣನ ಪಾದದ ಗುರುತು’’ ಎಂದು ಅದಕ್ಕೊಂದು ಕತೆ ಹೇಳುತ್ತಿದ್ದಳು. ಹಿಂದೆ ಗೋಪಾಲಕ ಕೃಷ್ಣ ಹಗಲಿಡೀ ಗೋವುಗಳನ್ನು ಮೇಯಿಸಿ ಹೊಟ್ಟೆ ತುಂಬಿಸಿ ಸಂಜೆ ಕರೆತಂದ ಮೇಲೂ ಒಂದು ದನ ಮಾತ್ರ ಕೊಟ್ಟಿಗೆ ಸೇರುವ ಬದಲು ಮನೆಯ ಸೂರಿಗೆ ಹೊದೆಸಿದ್ದ ಸೋಗೆಯನ್ನೇ ಜಗ್ಗಿ ಎಳೆದು ತಿನ್ನತೊಡಗಿತಂತೆ. ಶ್ರೀಕೃಷ್ಣನಿಗೆ ಕೋಪ ಬಂದು ಅದಕ್ಕೆ ಒದೆದನಂತೆ.

ಸೂರಿಗೆ ಬಾಯಿ ಹಾಕುವಷ್ಟು ಎತ್ತರದ ದನದ ಬೆನ್ನಿಗೆ ಶ್ರೀಕೃಷ್ಣ ಹೇಗೆ ಒದೆದಿರಬಹುದು ಎಂದು ವಾಮನ ಆಕಾರದ ನಾನು ಆಗೆಲ್ಲ ಯೋಚಿಸಿದ್ದುಂಟು. ವಾಮನ ಅವತಾರದಲ್ಲಿ ಬಲಿ ಚಕ್ರವರ್ತಿಯನ್ನು ಮೆಟ್ಟಿ ತುಳಿಯಲು ಆತ ಏನೋ ಟೆಕ್ನಿಕ್ ಮಾಡಿದ್ದ ಅನ್ನಿ. ಅದು ಹೇಗೆ ಅನ್ನೋದು ಈ ಕಾಲದ ಕಲಾವಿದರಿಗೂ ಹೊಳೆದಿಲ್ಲವಾದ್ದರಿಂದ ವಾಮನನ ಒಂದು ಕಾಲನ್ನು ಉದ್ದನ್ನ ಉಲ್ಟಾ ಕಂಬದಂತೆ ಹೇಗೋ ಚಿತ್ರಿಸಿರುತ್ತಾರೆ. ಆ ಕಾಲು, ಬಾಗಿ ನಿಂತ ಬಲಿಯ ಕೆನ್ನೆಯವರೆಗೆ ಹೋಗಿರುತ್ತದೆ ವಿನಾ ನೆತ್ತಿಯನ್ನು ಮೆಟ್ಟುವುದು ಹಾಗಿರಲಿ, ಮುಟ್ಟುವುದೇ ಇಲ್ಲ. ಕೃಷ್ಣನ ಅವತಾರದಲ್ಲಂತೂ ಇಂಥ ಎಡಬಿಡಂಗಿ ಚಿತ್ರ ಕೂಡ ನನ್ನ ಕಣ್ಣಿಗೆ ಬಿದ್ದಿರಲಿಲ್ಲವಾದ್ದರಿಂದ ಆತ ಬೇರೇನೋ ತಂತ್ರದಿಂದ ದನದ ಬೆನ್ನಿಗೆ ಒದೆದಿರಬೇಕು. ಈ ಮಲೆನಾಡ ಗಿಡ್ಡ ತಳಿಯ ದನಗಳು ಆಗಿನ ಕಾಲದಲ್ಲಿ ಮನೆಯ ಛಾವಣಿಯಷ್ಟು ಎತ್ತರಕ್ಕೆ ಇದ್ದುವೊ ಅಥವಾ ಈಗಿಗಿಂತ ಗಿಡ್ಡಕ್ಕೆ, ನಾಯಿಗಾತ್ರಕ್ಕೆ ಇದ್ದುವೊ? ಎತ್ತರದವಾಗಿದ್ದಿದ್ದರೆ ಆತ ನಿಂತಲ್ಲಿಂದಲೇ ಬ್ರೂಸ್ ಲೀ ಥರಾ ಹೈಜಂಪ್ ಮಾಡಿ ಬೆನ್ನಿಗೆ ಒದೆದನೆ? ಅಥವಾ ದನಗಳು ಕೊಟ್ಟಿಗೆಯನ್ನು ಸೇರುವ ಮೊದಲು ಆತ ಮನೆಯ ಸೂರಿನ ಮೇಲೇರಿ ಕೊಳಲು ಬಾರಿಸುತ್ತ ಕೂತಿರುತ್ತಿದ್ದನೆ? ತಾನು ಕೂತಿದ್ದ ಸೂರಿಗೆ ಸೂರನ್ನೇ ದನವೊಂದು ಸೂರೆಗೊಳ್ಳುತ್ತಿದ್ದಾಗ ಕೃಷ್ಣ ಗಡಬಡಿಸಿ ಕೆಳಕ್ಕೆ ಜಂಪ್ ಮಾಡಲು ಹೋಗಿ ಅಕಸ್ಮಾತ್ ಅದರ ಬೆನ್ನಿನ ಮೇಲೆ ಕಾಲಿಟ್ಟನೆ? ಆಗ ಹೊಮ್ಮಿದ ಆಕ್ರಂ–ದನ ಯಾರ ಬಾಯಿಂದ ಮೊದಲು ಹೊಮ್ಮಿರಬಹುದು? ಗೊತ್ತಿಲ್ಲ. ಆದರೆ, ಕೆಲವು ಅರೆಹೊಟ್ಟೆಯ ಸಣಕಲು ದನಗಳ ಬೆನ್ನಿನ ಮೇಲೆ ಈಗಲೂ ಹೆಜ್ಜೆಗುರುತು ಮೂಡುವುದಂತೂ ನಿಜ. ಬೆಂಗಳೂರಿನಲ್ಲಿ ತಿಪ್ಪೆಯ ಪ್ಲಾಸ್ಟಿಕ್ಕನ್ನೇ ಪರಮಾನ್ನವೆಂದು ಬಾಯಾಡಿಸುವ ದನಗಳಲ್ಲೂ ಅಂಥ ತ್ರಿಕೋನಾಕೃತಿಯ ಹಳ್ಳವನ್ನು ನಾನು ನೋಡಿದ್ದೇನೆ. ಆ ವಿಷಯದ ಚರ್ವಿತ ಚರ್ವಣ ಅದರ ಪಾಡಿಗಿರಲಿ. ಅಂತೂ ಸ್ವತಃ ಕೃಷ್ಣ ಪರಮಾತ್ಮನಿಂದ ಒದೆ ತಿಂದ ಮೇಲೂ ದನಗಳು ಯಾಕೊ ತಮ್ಮ ಪಾಡಿಗೆ ತಾವು ಕೊಟ್ಟಿಗೆ ಸೇರಿ ಪಾರ್ಕಿಂಗ್ ಪಾಠ ಕಲಿಯುವಷ್ಟು ವಿಕಾಸವಾಗಲಿಲ್ಲ.

ಪ್ರಾಣಿಗಳ ಪಾರ್ಕಿಂಗ್ ಚರ್ಯೆ ವಿಕಾಸವಾಗದಿದ್ದರೂ ಯಂತ್ರಗಳು ಆ ನಿಟ್ಟಿನಲ್ಲಿ ಈಗ ಸಾಕಷ್ಟು ವಿಕಾಸವಾಗಿವೆ. ವಿಧೇಯತೆಯನ್ನು ಮೈಗೂಡಿಸಿಕೊಂಡಿವೆ. ಈಗಲ್ಲ, ಹದಿನೈದು ವರ್ಷಗಳ ಹಿಂದೆಯೇ ‘ರೂಂಬಾ’ ಎಂಬ ಆಟೊಮ್ಯಾಟಿಕ್ ವ್ಯಾಕ್ಯೂಮ್ ಕ್ಲೀನರ್ ಯಂತ್ರಕ್ಕೆ ಅಂಥ ಸೆಲ್ಫ್ ಪಾರ್ಕಿಂಗ್ ಗುಣ ಬಂದುಬಿಟ್ಟಿದೆ. ಈಗ ಅದರ ಹೊಸ ಅವತಾರಗಳು ಬೆಂಗಳೂರಿಗೂ ಬಂದಿವೆ. ನೋಡಬೇಕೆಂದಿದ್ದರೆ ಗೂಗಲ್ ಮಾಡಿ, ನನಗೇನಂತೆ. ಅದರ ಕತೆ ಏನೆಂದರೆ, ಮನೆಮಂದಿಯೆಲ್ಲ ಬಾಗಿಲಿಗೆ ಬೀಗ ಹಾಕಿ ಕಚೇರಿಗೋ ಮಾಲ್‌ಗೋ ಅಥವಾ ಕೋವಿಡ್ ಲಸಿಕೆಯ ಕ್ಯಾಂಪಿಗೋ ಹೋದಮೇಲೆ ಮನೆಯ